# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಹಿರಿಯೂರು

## ಸಿ.ಸಿ ಸಂಖ್ಯೆ: 1087/2021

| | | | |
|---|---|---|---|
| ಹೆಸರು | – | ಚನ್ನೇಗೌಡ ಆರ್ ಜಿ | CW-34<br>PW-5 |
| ತಂದೆ ಹೆಸರು | – | ಗಂಗಪ್ಪ | |
| ವಯಸ್ಸು | – | 44 ವರ್ಷ | |
| ಉದ್ಯೋಗ | – | ಪಿ ಐ ವಿಶೇಷ ಶಾಖೆ ಬೆಂಗಳೂರು ನಗರ | |
| ವಾಸಸ್ಥಳ | – | ಬೆಂಗಳೂರು | |

ದಿನಾಂಕಃ23.07.2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಸಾಕ್ಷಿದಾರರ ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ**

ನಾನು ದಿಃ05.03.2019 ರಿಂದ 09.03.2020 ರವರೆಗೆ ಹಿರಿಯೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 01.05.2019 ರಂದು ಈ ಪ್ರಕರಣದ ತನಿಖೆಯನ್ನು ಚಾಸಾ.33 ರವರಿಂದ ಪಡೆದು ಮುಂದುವರೆಸಿರುತ್ತೇನೆ. ಈ ಪ್ರಕರಣದಲ್ಲಿ ಒಟ್ಟು 5 ಜನ ಮೃತ ಪಟ್ಟಿದ್ದು ಚಾಸಾ.30 ರಿಂದ 33 ರವರನ್ನು ಚಿತ್ರದುರ್ಗದ ಜಿಲ್ಲಾ ಆಸಪತ್ರೆಗೆ ಶವ ತನಿಖಾ ಪಂಚನಾಮೆಗೆ ಕಳುಹಿಸಿಕೊಟ್ಟಿರುತ್ತೇನೆ ಅದೇ ದಿನ ರಾತ್ರಿ 8.30 ರಿಂದ 10 ಗಂಟೆ ವರೆಗೆ ಮೃತೆ ಲತಾ ರವರ ಶವ ತನಿಖೆಯನ್ನು ಚಿತ್ರದುರ್ಗ ಜಿಲ್ಲಾ ಆಸ್ಪತೆಯಲ್ಲಿ ನಡೆಸಿ ಸಾಕ್ಷಿದಾರರಾದ ಚಾಸಾ.8 ರವರ ಹೇಳಿಕೆ ಪಡೆದಿರುತ್ತೇನೆ. ಸದರಿ ಶವ ಪಂಚನಾಮೆ ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-19 ಎಂದು ಸಹಿಯನ್ನು ನಿಪಿ-19(ಎ) ಎಂದು ಗುರುತಿಸಲಾಯಿತು.

ದಿಃ02.05.2019 ರಂದು ಹಿರಿಯೂರು ತಾಲೂಕು ಮೇಟಿಕುರ್ಕೆ ಗ್ರಾಮಾದ ಅರಣ್ಯದ ಎದುರುಗಡೆ ಎನ್ ಎಚ್-4 ರಸ್ತೆಯಲ್ಲಿ ಪಿರ್ಯಾದಿ ತೋರಿಸಿದ ಜಾಗದಲ್ಲಿ ಪಂಚರಾದ 4 ಮತ್ತು 5 ರವರ ಸಮಕ್ಷಮ ಬೆಳಿಗ್ಗೆ 10 ರಿಂದ 10.45 ರವರೆ ಪಂಚನಾಮೆ ಜರುಗಿಸಿ ಕಚ್ಚಾ ನಕಾಶೆ ತಯಾರಿಸಿದ್ದೇನೆ. ಸಾಕ್ಷಿ ನಿಪಿ-3, 4 ರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು ಸಹಿಗಳನ್ನು ನಿಪಿ-3 ಬಿ ಮತ್ತು

4 ಬಿ ಎಂದು ಗುರುತಿಸಲಾಯಿತು. ಕೃತ್ಯ ಸ್ಥಳದಲ್ಲಿ ಜಖಂ ಆಗಿರುವ ಒಂದು ವೀಲ್ ಕ್ಯಾಪ್, ಇಂಡಿಕೇಟರ್ ಗ್ಲಾಸ್, ಕೆಎ.03.ಎಂಜೆ.2465 ರ ಇನೋವ ಕಾರ್ , ಆರ್ ಜೆ 19 ಜಿ ಎಫ್ 2460 ರ ಲಾರಿಯನ್ನು ತಾಂತ್ರಿಕ ಪರೀಕ್ಷೆಗೆ ಅಳವಡಿಸಿಕೊಂಡಿದ್ದೇನೆ. ಸಾಕ್ಷಿ ನಿಪಿ-5 ರಿಂದ 13 ರ ಪೋಟೋಗಳನ್ನು ನೋಡಿ ಗುರುತಿಸಿದ್ದಾರೆ.

ನಂತರ ದಿಃ03.05.2019 ರಂದು ಅಪಘಾತಕ್ಕೊಳಪಟ್ಟ ಎರಡು ವಾಹನಗಳನ್ನು ಐ ಎಂ ವಿ ತಪಾಸಣೆಗೆಗಾಗಿ ಆರ್ ಟಿ ಒರವರಿಗೆ ವರದಿ ಸಲ್ಲಿಸಿದ್ದೇನೆ. ದಿಃ04.05.2019 ರಂದು ಆರ್ ಜೆ 19. ಜಿ ಎಫ್ 2460 ರ ವಾಹನದ ಆರ್ ಸಿ ಮಾಲಿಕ ಜಿ ಪಿ ಎ ಹೋಲ್ಡರ್ ರಿಂದ ಇಂಡಮ್ನಿಟಿ ಬಾಂಡ್ ಪಡೆದಿರುತ್ತೇನೆ. ಸದರಿ ದಾಖಲೆ ಸಾಕ್ಷಿ ಗುರುತಿಸಿದ್ದು ಇಂಡಮ್ನಿಟಿ ಬಾಂಡನ್ನು ನಿಪಿ-20 ಎಂದು ಸಹಿಯನ್ನು ನಿಪಿ-20 ಎ ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ.1 ರವರ ಮುಂದುವರೆದ ಹೇಳಿಕೆ ಪಡೆದಿರುತ್ತೇನೆ.

ದಿಃ14.05.2019 ರಂದು ಈ ಪ್ರಕರಣದಲ್ಲಿ ಮೃತರಾದ ಲತಾ, ಲಕ್ಷ್ಮಿ ದೇವಿ, ವರ್ಣಿಕ , ಸುಷ್ಮಿತ ಜಾಹ್ನವಿ ರವರ ಪಿ ಎಂ ವರದಿ ಪಡೆದಿರುತ್ತೇನೆ. ಸದರಿ ದಾಖಲೆಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-21 ರಿಂದ 25 ಎಂದು ಅದರಲ್ಲಿರುವ ಸಹಿಗಳನ್ನು ನಿಪಿ-21 ಎ ರಿಂದ 25 ಎ ಎಂದು ಗುರುತಿಸಲಾಯಿತು. ಅದೇ ದಿನ ಅಪಘಾತ ಪಡಿಸಿದ ಇನೋವಾ ಕಾರ್ ನ ಮಾಲೀಕರು ಠಾಣೆಗೆ ಹಾಜರಾಗಿದ್ದ ಮೇರೆಗೆ ಅವರಿಗೆ ಕಲಂ.133 ರಂತೆ ನೋಟೀಸ್ ಜಾರಿ ಮಾಡಿದ್ದೇನೆ. ಸದರಿ ನೋಟೀಸನ್ನು ನಿಪಿ-26 ಎಂದು ಸಹಿಯನ್ನು ನಿಪಿ-26 ಎ ಎಂದು ಗುರುತಿಸಲಾಯಿತು. ವಾಹನ ಮಾಲೀಕರು ಉತ್ತರ ನೀಡಿರುತ್ತಾರೆ. ಸದರಿ ಉತ್ತರವನ್ನು ನಿಪಿ-27 ಎಂದು ಸಹಿಯನ್ನು ನಿಪಿ-27 ಎ ಎಂದು ಗುರುತಿಸಲಾಯಿತು. ವಾಹನ ಮಾಲೀಕರು ಇಂಡಮ್ನಿಟಿ ಬಾಂಡ್ ನೀಡಿದ್ದು ಸದರಿ ದಾಖಲೆಯನ್ನು ನಿಪಿ-28 ಎಂದು ಸಹಿಯನ್ನು ನಿಪಿ-28 ಎ ಎಂದು ಗುರುತಿಸಲಾಯಿತು.

ದಿಃ22.06.2019 ರಂದು ಈ ಪ್ರಕರಣದಲ್ಲಿ ಅಪಘಾತಕ್ಕೊಳಪಟ್ಟ ವಾಹನಗಳ ಐ ಎಂ ವಿ ವರದಿ ಸ್ವೀಕರಿಸಿರುತ್ತೇನೆ. ಸದರಿ ಐ ಎಂ ವಿ ವರದಿಯನ್ನು ನಿಪಿ-29 ಎಂದು ಸಹಿಯನ್ನು ನಿಪಿ-29 ಎ ಎಂದು ಗುರುತಿಸಲಾಯಿತು.

ದಿಃ08.08.2019 ರಂದು ಸಾಕ್ಷಿದಾರರಾದ ಚಾಸಾ.25 ರಿಂದ 29 ರವರ ಹೇಳಿಕೆ ಪಡೆದಿರುತ್ತೇನೆ. ನನಗೆ ವರ್ಗಾವಣೆಯಾದ ಕಾರಣ ಪ್ರಕರಣದ ಕಡತವನ್ನು ದಿಃ10.03.2020 ರಂದು ಚಾಸಾ.35 ರವರಿಗೆ ವರ್ಗಾಯಿಸಿದ್ದೇನೆ .

**ಪಾಟೀ ಸವಾಲು ಆರೋಪಿ ಪರ ಶ್ರೀ ಸಿ ಕೆ ವಕೀಲರಿಂದಃ**

ದಿಃ 01.05.2019 ರಂದು ಈ ಪ್ರಕರಣದ ತನಿಖೆಯನ್ನು ಚಾಸಾ.33 ರವರಿಂದ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಮೃತ ಪಟ್ಟಿದ್ದು ಚಾಸಾ.30 ರಿಂದ 33 ರವರನ್ನು ಚಿತ್ರದುರ್ಗದ ಜಿಲ್ಲಾ ಆಸ್ಪತ್ರೆಗೆ ಶವ ತನಿಖಾ ಪಂಚನಾಮೆಗೆ ಕಳುಹಿಸಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಅದೇ ದಿನ ರಾತ್ರಿ 8.30 ರಿಂದ 10 ಗಂಟೆ ವರೆಗೆ ಮೃತೆ ಲತಾ ರವರ ಶವ ತನಿಖೆಯನ್ನು ಚಿತ್ರದುರ್ಗ ಜಿಲ್ಲಾ ಆಸ್ಪತ್ರೆ ಯಲ್ಲಿ ನಡೆಸಿಲ್ಲ ಎಂದರೆ ಸರಿಯಲ್ಲ ಸಾಕ್ಷಿದಾರರಾದ ಚಾಸಾ.8 ರವರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ.

ದಿಃ02.05.2019 ರಂದು ಹಿರಿಯೂರು ತಾಲೂಕು ಮೇಟಿಕುರ್ಕೆ ಗ್ರಾಮಾದ ಅರಣ್ಯದ ಎದುರುಗಡೆ ಎನ್ ಎಚ್-4 ರಸ್ತೆಯಲ್ಲಿ ಪಿರ್ಯಾದಿ ತೋರಿಸಿದ ಜಾಗದಲ್ಲಿ ಪಂಚರಾದ 4 ಮತ್ತು 5 ರವರ ಸಮಕ್ಷಮ ಬೆಳಿಗ್ಗೆ 10 ರಿಂದ 10.45 ರವರೆ ಪಂಚನಾಮೆ ಜರುಗಿಸಿಲ್ಲ ಎಂದರೆ ಸರಿಯಲ್ಲ. ಕಚ್ಚಾ ನಕಾಶೆ ತಯಾರಿಸಿಲ್ಲ ಎಂದರೆ ಸರಿಯಲ್ಲ. ಕೃತ್ಯ ಸ್ಥಳದಲ್ಲಿ ಜಖಂ ಆಗಿರುವ ಒಂದು ವೀಲ್ ಕ್ಯಾಪ್, ಇಂಡಿಕೇಟರ್ ಗ್ಲಾಸ್, ಕೆಎ.03.ಎಂಜೆ.2465 ರ ಇನೋವ ಕಾರ್ , ಆರ್ ಜೆ 19 ಜಿ ಎಪ್ 2460 ರ

ಲಾರಿಯನ್ನು ತಾಂತ್ರಿಕ ಪರೀಕ್ಷೆಗೆ ಅಳವಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಫೋಟೋಗಳನ್ನು ತೆಗೆಸಿಲ್ಲ ಎಂದರೆ ಸರಿಯಲ್ಲ.

ದಿಃ03.05.2019 ರಂದು ಅಪಘಾತಕ್ಕೊಳಪಟ್ಟ ಎರಡು ವಾಹನಗಳನ್ನು ಐ ಎಂ ವಿ ತಪಾಸಣೆಗೆಗಾಗಿ ಆರ್ ಟಿ ಒ ರವರಿಗೆ ವರದಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ದಿಃ04.05.2019 ರಂದು ಆರ್ ಜೆ 19. ಜಿ ಎಫ್ 2460 ರ ವಾಹನದ ಆರ್ ಸಿ ಮಾಲಿಕ ಜಿ ಪಿ ಎ ಹೋಲ್ಡರ್ ರಿಂದ ಇಂಡಮ್ನಿಟಿ ಬಾಂಡ್ ಪಡೆದಿಲ್ಲ ಎಂದರೆ ಸರಿಯಲ್ಲ. ಅದೇ ದಿನ ಚಾಸಾ.1 ರವರ ಮುಂದುವರೆದ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ.

ದಿಃ14.05.2019 ರಂದು ಈ ಪ್ರಕರಣದಲ್ಲಿ ಮೃತರಾದ ಲತಾ, ಲಕ್ಷ್ಮಿ ದೇವಿ, ವರ್ಣಿಕ , ಸುಷ್ಮಿತ ಜಾಹ್ನವಿ ರವರ ಪಿ ಎಂ ವರದಿ ಪಡೆದಿಕೊಂಡಿಲ್ಲ ಎಂದರೆ ಸರಿಯಲ್ಲ. ಅದೇ ದಿನ ಅಪಘಾತ ಪಡಿಸಿದ ಇನೋವಾ ಕಾರ್ ನ ಮಾಲೀಕರಿಂದ ದಾಖಲೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಅವರಿಗೆ ಕಲಂ.133 ರಂತೆ ನೋಟೀಸ್ ಜಾರಿ ಮಾಡಿಲ್ಲ ಎಂದರೆ ಸರಿಯಲ್ಲ. ವಾಹನ ಮಾಲೀಕರು ಉತ್ತರ ನೀಡಿಲ್ಲ ಎಂದರೆ ಸರಿಯಲ್ಲ. ವಾಹನ ಮಾಲೀಕರು ಇಂಡಮ್ನಿಟಿ ಬಾಂಡ್ ನೀಡಿಲ್ಲ ಎಂದರೆ ಸರಿಯಲ್ಲ.

ದಿಃ22.06.2019 ರಂದು ಈ ಪ್ರಕರಣದಲ್ಲಿ ಅಪಘಾತಕ್ಕೊಳಪಟ್ಟ ವಾಹನಗಳ ಐ ಎಂ ವಿ ವರದಿ ಸ್ವೀಕರಿಸಿಲ್ಲ ಎಂದರೆ ಸರಿಯಲ್ಲ. ದಿಃ08.08.2019 ರಂದು ಸಾಕ್ಷಿದಾರರಾದ ಚಾಸಾ.25 ರಿಂದ 29 ರವರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ದಿಃ10.03.2020 ರಂದು ಚಾಸಾ.35 ರವರಿಗೆ ವರ್ಗಾಯಿಸಿಲ್ಲ ಎಂದರೆ ಸರಿಯಲ್ಲ. ಆರೋಪಿ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು